ಅವನನ್ನು ಮಾತಾಡಿಸುವುದು ತಪ್ಪು, ಏನಾದರೂ ಕೇಳಿದರೆ ಅವನು ಸರಿಯಾಗಿ ಉತ್ತರ ಕೊಡುವವನೂ ಅಲ್ಲ ಎಂದು ಅವರು ಬಲ್ಲರು. 'ಏನಿಲ್ಲ, ಇವತ್ತು ಬಿಸಿಲು ಜೋರಾಗಿತ್ತೆ ಅಂತ ಕೇಳಿದೆ ಅಷ್ಟೇ' ಅಂದವರೇ ಸುಮ್ಮನಾಗಿ ಬಿಟ್ಟರು.

ಸೂರಿ ಪದ್ಧತಿಯಂತೆ ಆ ಅಡ್ಡ ಹೊತ್ತಿನಲ್ಲಿ ಎರಡು ತುತ್ತುಂಡು ಮಹಡಿ ಹತ್ತಿದ. ಹಾಸಿಗೆಯ ಸುರುಳಿ ಬಿಚ್ಚಿ ಮೈಚಾಚಿದ. ದಿನವೂ ಒಂದೆರಡು ಗಂಟೆ ಮಲಗುತ್ತಿದ್ದವನಿಗೆ ಇವತ್ತು ನಿದ್ದೆಯೇ ಬರಲೊಲ್ಲದು. ಜೋನಿಯದೇ ಯೋಚನೆ, ಬೆಳಗಿನಿಂದ ಮನಸ್ಸು ಉಲ್ಲಾಸಗೊಂಡಿದ್ದು, ಮರದ ಮೇಲೆ ಜೋಡಿ ಗಿಣಿಗಳನ್ನು ಕಂಡಿದ್ದು ಜೋನಿಯೊಡನೆ ಕೂಡಿದ ಸಂಬಂಧಕ್ಕೆ ಮುನ್ಸೂಚನೆಯೇ ಎಂದು ಯೋಚಿಸತೊಡಗಿದ. ಹಾಗೆ ಯೋಚಿಸುತ್ತಾ ಮುಖದ ಹತ್ತಿರ ಕೈತಂದಾಗ ಬೆರಗಳುಗಳಲ್ಲಿ ಅವಳದೇ ಸುವಾಸನೆ. ಬಹಳ ಹೊತ್ತು ಅವಳು ಕೈ ಹಿಡಿದಿದ್ದಳಲ್ಲವೇ? ಸವಿದಷ್ಟೂ ಆ ವಾಸನೆ ಹೆಚ್ಚುತ್ತ ಹೋಗಿ ಇಡೀ ಕೋಣೆಯನ್ನು ಆವರಿಸಿತು. ಅಂದಿನಿಂದ ಅದು ಅವನ ಬಾಳಿನ ಒಂದು ಅವಿಭಾಜ್ಯ ಅಂಗವಾಯಿತು!

ಸೂರಿ ಜೇಬಿನಿಂದ ಜೋನಿಯ ಫೋಟೊ ತೆಗೆದು ನೋಡುತ್ತ ಕುಳಿತ. ನೋಡುತ್ತ ಹೋದಂತೆ ಅವಳ ಕಣ್ಣು, ಮೂಗು, ತುಟಿ, ಕೆಂಗೂದಲು, ಒಂದೊಂದೂ ಸ್ಪಷ್ಟವಾಗುತ್ತ ಹೋದವು. ಆದರೆ ಫೋಟೊ ಸಣ್ಣದು, ದೊಡ್ಡದು ಮಾಡಿಸಬೇಕು. ಆಗಲೇ ಚೆನ್ನ. ಆದರೆ ಆ ಊರಿನ ಬಾಂಬೇ ಸ್ಟುಡಿಯೋದ ಪೀಟರ್‌ನಲ್ಲಿ ಅದಕ್ಕೆ ವ್ಯವಸ್ಥೆಯಿರಲಿಲ್ಲ. ಅವನು ರಾತ್ರಿಯ ಕಗ್ಗತ್ತಲಿನಲ್ಲಿ ಫಿಲಂ ತೊಳೆದು, ಬೆಳಗ್ಗೆ ಬಿಸಿಲ ಬೆಳಕನ್ನು ಹಾಯಿಸಿ ತುಂಬ ಕಪ್ಪಗೊ ತುಂಬ ಬೆಳ್ಳಗೋ ಪ್ರಿಂಟ್ ಮಾಡಿಕೊಡುತ್ತಿದ್ದದೆಷ್ಟೋ ಅಷ್ಟೆ. ಇನ್ನು ಮೈಸೂರಿಗೋ, ಬೆಂಗಳೂರಿಗೋ ಹೋಗಬೇಕು. ಸೂರಿ ಎದ್ದು ಫೋಟೊವನ್ನು ಕಪಾಟಿನಲ್ಲಿದ್ದ ಅಪ್ಪನ ಶ್ರೀಮದ್ ವಾಲ್ಮೀಕಿ ರಾಮಾಯಣದ ಸೀತಾಸ್ವಯಂವರದ ಪುಟಗಳ ನಡುವೆ ಜೋಪಾನವಾಗಿಟ್ಟ, ಇಡುವ ಮೊದಲು ಒಮ್ಮೆ ಕಣ್ಣಿಗೊತ್ತಿಕೊಂಡು ಅದಕ್ಕೊಂದು ಮುತ್ತು ಕೊಟ್ಟ. ಮತ್ತೆ ಐದು ನಿಮಿಷ ಬಿಟ್ಟು ಇನ್ನೊಂದು ಸಲ ತೆಗೆದು ನೋಡಿದ, ಮತ್ತೆ ಇಟ್ಟ.

ಕಣ್ಣು ಕೋಣೆಯ ನಾಲ್ಕೂ ಕಡೆಗೆ ಹರಿಯಿತು. ಜೋನಿಗೆ ಲಾಯಕ್ಕಾಗಬೇಕಾದರೆ ಏನೆಲ್ಲ ಮಾಡಬೇಕು? ನೆಲ, ಗೋಡೆ, ತಾರಸಿ, ಸುಣ್ಣ, ಬಣ್ಣ, ಮೊದಲು ಹಿತ್ತಲ ಗಬ್ಬು ಹೊಡೆಯುವ ಗುಂಡಿ ಕಕ್ಕಸ್ಸನ್ನು ಮುಚ್ಚಿಸಿ ಪಿಂಗಾಣಿಯ ಕಮೋಡ್ ಕಕ್ಕಸನ್ನು ಕಟ್ಟಿಸಬೇಕು. ಸೀಬೆ ಮರ ಕಡಿಸಿ, ಸೇಬಿನ ಮರ ಹಾಕಿಸಬೇಕು, ಕಣಗಿಲೆ ಕನಕಾಂಬರಗಳನ್ನು ತೆಗೆಸಿ ಟೊಮ್ಯಾಟೊ ಬೆಳೆಸಬೇಕು. ಇಂಗ್ಲೆಂಡಿನಲ್ಲಿ ಮನೆಗಳು ಹೇಗಿರುತ್ತವೋ? ಜೋನಿಯ ಮೆಚ್ಚಿನ ಬಣ್ಣ ಯಾವುದು? ಅವಳಿಗೇ ಬರೆದು ಕೇಳುವುದೆಂದುಕೊಂಡ, ತಕ್ಷಣ ಅವನಿಗೆ ತಲೆಯ ಮೇಲೆ ಸೂರು ಮುರಿದು ಬಿದ್ದಂತಾಯಿತು, ಮೈಬೆವರಿತು. ಅಯ್ಯೋ ಅವಳ ವಿಳಾಸವನ್ನು ಕೇಳಿ ಪಡೆಯುವುದೇ ಮರೆಯಿತಲ್ಲ. ಎಂಥ ಅನಾಹುತವಾಯಿತು? ಫೋಟೊದ ಹಿಂಬದಿ ಏನಾದರೂ ಇರಬಹುದೆ? ಎಂದು ತೆಗೆದು ನೋಡಿದ. ಅಲ್ಲಿ ಫೋಟೊ ತೆಗೆದ ಸ್ಟುಡಿಯೋದ ವಿಳಾಸ ರಬ್ಬರ್ ಸ್ಟ್ಯಾಂಪಿನಲ್ಲಿ ಮಸುಕು ಮಸಕಾಗಿ ಒತ್ತಿತ್ತೇ ವಿನಹ ಅವಳದ್ದಿರಲಿಲ್ಲ. ಅವಳಿಗೂ ತಾನು ಬೇಕು. ಅಂದ ಮೇಲೆ ಅವಳೇನೂ ಬರೆಯದೆ ಇರುವುದಿಲ್ಲ. ಓ, ಆದರೆ ಅವಳಲ್ಲೂ ನನ್ನ ವಿಳಾಸವಿಲ್ಲ. ಅವಳೂ ಕೇಳಿರಲಿಲ್ಲ, ತಾನೂ ಕೊಟ್ಟಿರಲಿಲ್ಲ. ಅವಳೇನು ದಡ್ಡಿಯೆ? ಹೆಸರು ಪೂರ್ತಿ ಸೂರ್ಯನಾರಾಯಣ ಎಂದು ಗೊತ್ತಿಲ್ಲವಾದರೂ 'ಸೂರಿ' ಎಂದು ಗೊತ್ತಿದೆ. ಊರಲ್ಲಿ ತಾನು ಅಪ್ರತಿಷ್ಠಿತನೇನಲ್ಲ, 'ಗೈಡ್' ಎಂದೂ ಗೊತ್ತು. ಇನ್ನು ಊರಂತೂ ಅವಳ ಪುರಾತನರೇ ಗೆದ್ದು ಆಳುತ್ತಿರುವ ಜಗತ್ಪ್ರಸಿದ್ಧ ಸ್ಥಳ. ಅಷ್ಟು ಹೊಳೆಯದೇ ಇರುತ್ತದೆಯೇ, ಬರೆದೇ ಬರೆಯುತ್ತಾಳೆ ಎಂದುಕೊಂಡು ನೆಮ್ಮದಿ ತಂದುಕೊಂಡ.

ಸಂಜೆ ಕೆಳಗಿಳಿದು ಬಂದಾಗ ಅಮ್ಮ ಕೆಳಗಿನ ಕಪಾಟಿನಲ್ಲಿದ್ದುದೆಲ್ಲವನ್ನೂ ಹರಡಿಕೊಂಡು